ಎಂದೂ ತಿಳಿಸಿದ್ದಳು.

ಬಲಿ ಬಹನಳ ಅಭಿಪ್ರಾಯದಂತೆಯೇ ಬಾಪೂ ಅವರು ತಮ್ಮ ವಿಚಾರವನ್ನು ವ್ಯಕ್ತಪಡಿಸಿದ್ದರು. ಅಲ್ಲದೆ ಬಾಪೂ ಅವರು, ಮಕ್ಕಳ ಮೇಲೆ ಮೊದಲ ಹಕ್ಕು ಹರಿಲಾಲನಿಗಿದೆ ಎಂಬುದನ್ನು ಸ್ಪಷ್ಟಪಡಿಸಿದ್ದರು. ಕಾಂತಿಗೆ ಒಂದು ವೇಳೆ ತನ್ನ ತಂದೆಯ ಮಾತು ಒಪ್ಪಿಗೆಯಾದರೆ ಅವನು ಚೆನ್ನಾಗಿ ಯೋಚಿಸಿ ತನ್ನ ತೀರ್ಮಾನವನ್ನು ಅವನೇ ತೆಗೆದುಕೊಳ್ಳಬಲ್ಲ... ಹರಿಲಾಲನ ವಿಚಾರಗಳು ತಪ್ಪು, ನೀನು ಅವಸರದಲ್ಲಿ ಯಾವುದೇ ಹೆಜ್ಜೆಯನ್ನಿಡಬೇಡ ಎಂದೂ ಸಹ ಬಾಪೂ ಅವರು ಬಲಿ ಬಹನಳಿಗೆ ಪತ್ರದಲ್ಲಿ ತಿಳಿಸಿದ್ದರು.

ಮತ್ತೊಮ್ಮೆ ಹರಿಲಾಲನ ರೋಮ ರೋಮಗಳು ರೋಷದ ಬೆಂಕಿಯಲ್ಲಿ ಬೆಂದವು. ಅವನ ಹೃದಯದಲ್ಲಿ ಜ್ವಾಲಾಮುಖಿಯೇ ಸ್ಫೋಟಿಸಿದಂತಾಯಿತು. ಅವನ ಮನಸ್ಸಿನಲ್ಲಿ ಬಲಿ ಬಹನಳ ಬಗ್ಗೆ ಮೊದಲಿನಿಂದಲೂ ಜಿಗುಪ್ಸೆಯಿತ್ತು. ಅದರೊಂದಿಗೆ ಈಗ ತಿರಸ್ಕಾರವೂ ಸೇರಿಕೊಂಡಿತು. ಬಾಪೂ ಅವರ ಬಗೆಗಿದ್ದ ಸಿಟ್ಟು ಸ್ಪ್ರಿಂಗ್‌ನಂತೆ ಚಿಮ್ಮಿತು. ಹರಿಲಾಲ ಎರಡು ದಿನಗಳವರೆಗೆ ಕಚೇರಿಗೇ ಹೋಗಲಿಲ್ಲ.

ಇಡೀ ದಿನ ಅವನು ಒಂದಾದ ಮೇಲೆ ಒಂದರಂತೆ ಪೆಗ್ ಖಾಲಿ ಮಾಡುತ್ತಾ ಕೋಣೆಯಲ್ಲಿ ಕೂತಿದ್ದ. ಆ ದಿನಗಳಲ್ಲಿ ಅವನು ಏನೂ ತಿಂದಿರಲಿಲ್ಲ. ನಡುರಾತ್ರಿಗೆ ಕೆಳಗಿಳಿದು ಬಂದ, ಓಲಾಡುತ್ತಾ ಧೋಬಿ ತಲಾಬ್‌ವರೆಗೆ ಬಂದ, ಅಲ್ಲಿಂದ ಹಾದು ಹೋಗುತ್ತಿದ್ದ ಹದಿಮೂರನೇ ನಂಬರಿನ ಟ್ರಾಮನ್ನು ಹತ್ತಿದ. ಆ ಟ್ರಾಮ್ ಅವನನ್ನು ನಲ್ ಬಜಾರಿನ ಸರ್ಕಲ್ ಸಮೀಪದಲ್ಲಿ ಇಳಿಸಿದಾಗ, ಫಾರಸ್ ರೋಡಿನ ರೆಡ್ ಲೈಟ್ ಉರಿಯುತ್ತಿತ್ತು.

ಹರಿಲಾಲ ಕಚೇರಿಗೆ ನಿಯಮಿತವಾಗಿ ಬರುತ್ತಿರಲಿಲ್ಲ. ಇದನ್ನು ಗೋದರೇಜ್ ಸೇಠ್‌ರು ಎಂದೂ ವಿಚಾರಿಸಿರಲಿಲ್ಲ. ಆದರೆ ಈ ಬಾರಿ ಅವನು ಒಟ್ಟು ಹದಿನೈದು ದಿನಗಳವರೆಗೆ ಕಚೇರಿಗೆ ಹೋಗಲಿಲ್ಲ, ಈ ಬಗ್ಗೆ ಯಾವುದೇ ಮಾಹಿತಿಯನ್ನೂ ಕಳುಹಿಸಲಿಲ್ಲ. ಹೊರ ಶಾಖೆಗಳಿಂದ ದೊರೆತ ಸುದ್ದಿಗಳ ಪ್ರಕಾರ ಹರಿಲಾಲ ಕಚೇರಿಗೆ ಹೋದ ಬಗ್ಗೆ ಮಾಹಿತಿಯೂ ಸಿಕ್ಕಿರಲಿಲ್ಲ. ಗೋದರೇಜ್ ಸೇಠ್ ಅವರಿಗೆ ಹರಿಲಾಲನ ಅಭ್ಯಾಸಗಳ ಬಗ್ಗೆ ಈ ಮೊದಲೇ ತಿಳಿದಿತ್ತು. ಹೀಗಾಗಿ ಅವರ ಚಿಂತೆ ಸ್ವಾಭಾವಿಕವಾಗಿತ್ತು. ಅವರು ಕಶ್ಮೀರಿ ಹೊಟೇಲ್‌ನಲ್ಲಿ ವಿಚಾರಣೆಯನ್ನು ಮಾಡಿಸಿದಾಗ, ಹರಿಲಾಲ ಅಲ್ಲಿಯೇ ಇರುವುದು ತಿಳಿಯಿತು. ಅವರಿಗೆ ವಿಚಿತ್ರವೆಂದು ತೋರಿತು, ಅಲ್ಲದೆ ಅವರು ಕಳವಳಗೊಂಡರು. ಅಂದು ಸಂಜೆ ಗೋದರೇಜ್ ಅವರೇ ಖುದ್ದು ವಿಚಾರಿಸಲು ಕಶ್ಮೀರಿ ಹೊಟೇಲ್‌ಗೆ ಬಂದರು.

ಅಕಸ್ಮಾತ್ ಎದುರಿಗೆ ಗೋದರೇಜ್ ಸೇಠ್‌ರು ತನ್ನ ಕೋಣೆಯ ಬಾಗಿಲ ಬಳಿ ನಿಂತಿರುವುದನ್ನು ನೋಡಿ ಹರಿಲಾಲ ಗಾಬರಿಗೊಂಡ. ಅವನು ಎದ್ದು ನಿಲ್ಲಲು ಪ್ರಯತ್ನಿಸಿದ, ಆದರೆ ಸಾಧ್ಯವಾಗಲಿಲ್ಲ. ಗೋದರೇಜ್ ಸೇಠ್‌ರು ಅವನಿಗೆ ಆಸರೆ ಕೊಟ್ಟು, ಕುರ್ಚಿಯಲ್ಲಿ ಕೂರಿಸಿದರು. ಅವರಿಗೆ ಹರಿಲಾಲನ ಪರಿಸ್ಥಿತಿ ಅರ್ಥವಾಯಿತು. ಹರಿಲಾಲ ಮನಸಾರೆ ಕುಡಿದಿದ್ದ. ಇಡೀ ಕೋಣೆ ಅಸ್ತವ್ಯಸ್ತವಾಗಿತ್ತು. ಅಲ್ಲಲ್ಲಿ ಮದ್ಯದ ಬಾಟಲಿಗಳು ಬಿದ್ದಿದ್ದವು. ಹರಿಲಾಲ ಮುಖ ಕ್ಷೌರ ಮಾಡಿಕೊಳ್ಳದೆ ಅದೆಷ್ಟೋ ದಿನಗಳಾಗಿತ್ತು. ಬಟ್ಟೆಗಳು, ಬ್ರೆಡ್ ತುಂಡುಗಳು ಮತ್ತು ಆಹಾರದ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು.

'ಹರಿಲಾಲ್, ನಿನಗೇನಾಗಿದೆ?' ಗೋದರೇಜ್ ಸೇಠ್‌ರು ಸಮೀಪದಲ್ಲಿ ಕೂರುತ್ತಾ ಸಹಾನುಭೂತಿಯಿಂದ ಕೇಳಿದರು, 'ಇಷ್ಟು ಕುಡಿಯುವುದು ಒಳ್ಳೆಯದೇ?'

ಹರಿಲಾಲ ಮಾತನಾಡಲಿಲ್ಲ. ಅವನು ನಕ್ಕು, ಭಾವಣಿಯೆಡೆಗೆ ಬೆರಳು ಮಾಡಿ ತನ್ನ ಕಣ್ಣುಗಳನ್ನು ಮುಚ್ಚಿಕೊಂಡ.

'ನೋಡು ಹರಿ,' ಗೋದರೇಜ್ ಸೇಠ್‌ರು ಹೇಳಿದರು, 'ಮದ್ಯವನ್ನು ನಾನೂ ಸೇವಿಸುತ್ತೇನೆ... ಆದರೆ ನೀನು ಇದೇನು ಮಾಡುತ್ತಿದ್ದೀಯ? ಪ್ರಜ್ಞೆ ಕಳೆದು ಹೋಗುವಂತೆ ಮದ್ಯವನ್ನು ಸೇವಿಸುವುದು ತಪ್ಪು. ಅಲ್ಲದೆ, ನೀನು ಬಾಪೂ ಅವರ ಮಗನಾಗಿದ್ದೀಯ.'

ಹರಿಲಾಲ ಅಕಸ್ಮಾತ್ ಆಶ್ಚರ್ಯದಿಂದ ಕಣ್ಣುಗಳನ್ನು ತೆರೆದ. ನಂತರ ಗೋದರೇಜ್ ಸೇಠ್‌ರನ್ನು ತುಂಬಾ ನಿರಾಸಕ್ತಿಯಿಂದ ನೋಡಿದ. ಅವನ ತುಟಿಗಳು ಕಂಪಿಸಿದವು. ಕಡೆಗೆ ಹೇಗೋ ಮಾಡಿ ಎಂಜಲನ್ನು ನುಂಗಿದ.

'ಹರಿಲಾಲ್, ಇನ್ನು ನೀನು ಬದಲಾಗಬೇಕು,' ಗೋದರೇಜ್ ಸೇಠ್‌ರು ಹಿರಿಯರಾಗಿ ಹೇಳಿದರು, 'ನೀನು ಹೀಗೆ ಮಾಡಿದರೆ ಕಂಪನಿಯ ಕೆಲಸವನ್ನು ಹೇಗೆ ಮಾಡುತ್ತೀಯ?'

'ಕಂಪನಿ!' ಹರಿಲಾಲ ಮೊದಲ ಬಾರಿಗೆ ಮಾತನಾಡಿದ, 'ಸೇಠ್‌ಜಿ, ನಾನು ಕಂಪನಿಯ ಕೆಲಸವನ್ನೇ ಮಾಡಲು ಬಯಸುವುದಿಲ್ಲ. ನಾನೀಗ ಕಂಪನಿಯ ನೌಕರನಲ್ಲ. ನಾನು ರಾಜೀನಾಮೆ ಕೊಟ್ಟಿದ್ದೇನೆಂದು ತಿಳಿಯಿರಿ.'

ಗೋದರೇಜ್ ಸೇಠ್‌ರಿಗೆ ಆಶ್ಚರ್ಯವಾಯಿತು. ಮರುಕ್ಷಣವೇ ತಮ್ಮನ್ನು ಸುಧಾರಿಸಿಕೊಂಡು ಹೇಳಿದರು, 'ಇದನ್ನೆಲ್ಲಾ ಆಮೇಲೆ ಮಾತನಾಡೋಣ, ಭೈಯ್ಯಾ! ನಿನಗೆ ಹಣದ ಅಗತ್ಯವಿದ್ದರೆ ಸಂಕೋಚ ಮಾಡಿಕೊಳ್ಳಬೇಡ. ನೀನು ಕಂಪನಿಗಾಗಿ ಒಳ್ಳೆಯ ಕೆಲಸವನ್ನು ಮಾಡಿದ್ದೀಯ. ದೇವರು ನಿನಗೆ ಸದ್ಬುದ್ಧಿಯನ್ನು ಕೊಡಲಿ.'

ಹರಿಲಾಲ ಮತ್ತೆ ಕಣ್ಣುಗಳನ್ನು ಮುಚ್ಚಿಕೊಂಡ. ಗೋದರೇಜ್ ಸೇಠ್‌ರು ಸ್ವಲ್ಪ ಹೊತ್ತು ಕೂತಿದ್ದು, ನಂತರ ಅಲ್ಲಿಂದ ಮೌನವಾಗಿ ಹೊರಟು ಹೋದರು.

* * *

### ಕಂಪನಿ ತ್ಯಜಿಸಿದ ಹರಿಲಾಲ

ಆದರೆ ತದನಂತರ ಹರಿಲಾಲ ಕಂಪನಿಯ ಕೆಲಸವನ್ನೇ ವಾಸ್ತವವಾಗಿ ತ್ಯಜಿಸಿದ. ಅವನು ಈ ಮೊದಲೇ ಕಚೇರಿಗೆ ಹೋಗುವುದನ್ನು ಬಿಟ್ಟಿದ್ದ. ಈಗ ಅತ್ತ ಕಡೆ ಹೊರಳಿಯೂ ನೋಡಲಿಲ್ಲ, ತನಗೂ ಕಂಪನಿಗೂ ಸಂಬಂಧವೇ ಇಲ್ಲವೆಂಬಂತೆ ವರ್ತಿಸಿದ. ಅವನ ಆಸಕ್ತಿಗಳೆಲ್ಲವೂ ಮಣ್ಣುಪಾಲಾದವು.

ಹರಿಲಾಲನನ್ನು ಕ್ರೋಧ ಮತ್ತು ಹತಾಶೆ ನಾಲ್ಕೂ ಕಡೆಗಳಿಂದ ಆವರಿಸಿತ್ತು. ಈಗ ಮತ್ತೊಮ್ಮೆ ಬಾಪೂ ಅವರ ಬಗ್ಗೆ ಅತೀವ ಆಕ್ರೋಶ ತಾಳುವ ಸಮಯ ಎದುರಾಗಿತ್ತು. ಬಾಪೂ ಒಂದು ಕಡೆ ತನ್ನ ಮಕ್ಕಳ ಬಗ್ಗೆ ತನ್ನ ಹಕ್ಕನ್ನು ಒಪ್ಪಿಕೊಳ್ಳುತ್ತಿದ್ದಾರೆ, ಆದರೆ ತನಗೆ ಇಷ್ಟವಾದುದನ್ನು ಕೈಗೊಳ್ಳುವ ತೀರ್ಮಾನ ತೆಗೆದುಕೊಳ್ಳುವಲ್ಲಿ ತನಗೆ ಸಹಾಯ ಮಾಡುವುದಕ್ಕೆ ಪ್ರತಿಯಾಗಿ ಅಡ್ಡಿಯಾಗುತ್ತಿದ್ದಾರೆ ಎಂದು ಅವನಿಗೆ ಅನ್ನಿಸಿತು. ಇಷ್ಟೇ ಆಗಿದ್ದರೆ ಯೋಚನೆಯಿರಲಿಲ್ಲ, ಆದರೆ ಇಲ್ಲಿ ಅವರು ತನ್ನ ತೀರ್ಮಾನವನ್ನು ವಿರೋಧಿಸಿ ತೊಂದರೆಯನ್ನೇ ಕೊಡುತ್ತಿದ್ದಾರೆ. ಬಾಪೂ ಅವರು ಯಾವುದನ್ನು ವಿರೋಧಿಸಲು ಆರಂಭಿಸುವರೋ, ಅದನ್ನು ಕಾರ್ಯರೂಪಕ್ಕೆ ತರುವುದು ಎಲ್ಲರಿಗೂ ಎಷ್ಟು ಕಷ್ಟದ ಕೆಲಸವಾಗುತ್ತದೆ ಎಂಬುದು ಹರಿಲಾಲನಿಗೆ ತಿಳಿದಿತ್ತು. ಬಾಪೂ ಅವರಿಗೆ ಪತ್ರವನ್ನು ಬರೆಯುವ ಅಗತ್ಯ ಕಾಣ ಬರಲಿಲ್ಲ. ಬಲಿ ಬಹನ್ ಸಹ ತಾನು ತೀರ್ಮಾನಿಸಿದ್ದನ್ನೇ ಈಗ ಕಾರ್ಯರೂಪಕ್ಕೆ ತರುತ್ತಾಳೆ; ಅದಕ್ಕೆ ಅವಳಿಗೆ ಬಾಪೂ ಅವರ ಸಮರ್ಥನೆಯೂ ಲಭಿಸಿತ್ತು.

ಹರಿಲಾಲ ಸಿಟ್ಟಿನಿಂದ ಕುದಿದ. ಮನದೊಳಗಿದ್ದ ದುಃಖವನ್ನು ಹೊರ ಹಾಕಲು ಯಾವ ಮಾರ್ಗವೂ ಇರಲಿಲ್ಲ. ಈ ದುಃಖವನ್ನು ಹಗುರಗೊಳಿಸಿ ಕೊಳ್ಳದ ಹೊರತು ಅವನ ಮನಸ್ಸಿಗೆ ನೆಮ್ಮದಿ ಸಿಗುತ್ತಿರಲಿಲ್ಲ. ಬಾಪೂ ಅವನನ್ನು ಧರ್ಮ ಭ್ರಷ್ಟನೆಂದು ತಿಳಿಯುತ್ತಿದ್ದರು. ಆದರೆ ಸ್ವತಃ ಬಾಪೂ ಅವರೇ ತಮ್ಮ ಮಗನ ಬಗ್ಗೆ ಯಾವ ಭಾವನೆಯನ್ನು ಹೊಂದಿರುವರೋ, ಅದೇ ದೊಡ್ಡ ಅಧರ್ಮವಾಗಿದೆ. ಬಾಪೂ ಅವರ ಈ ಅನ್ಯಾಯದ ಬಗ್ಗೆ, ಅಧರ್ಮದ ವರ್ತನೆಯ ವಿರುದ್ಧ ತಾನು ಸಾರ್ವಜನಿಕರೆದುರು ದೂರನ್ನು ಹೇಳಬೇಕು, ಜನರಿಂದ ನ್ಯಾಯವನ್ನು ಯಾಚಿಸಬೇಕು ಎಂದು ಹರಿಲಾಲನಿಗೆ ಅನ್ನಿಸಿತು. ಬಾಪೂ ತನಗೆಂದೂ ನ್ಯಾಯವನ್ನು ಕೊಡಲಾರರು ಎಂಬ ದೃಢ ವಿಶ್ವಾಸ ಅವನಿಗಾಗಿತ್ತು.

ತೀರ್ಮಾನ ಕೈಗೊಂಡ ನಂತರ ಹರಿಲಾಲ ತನ್ನ ವಿಚಾರಗಳನ್ನು ಹಾಳೆಯಲ್ಲಿ ವ್ಯಕ್ತಪಡಿಸಲು ಆರಂಭಿಸಿದ. ಅವನು ಈ ಮೊದಲು ಸಹ ಸಾರ್ವಜನಿಕ ಪತ್ರದ ಮೂಲಕ ಬಾಪೂ ಅವರಿಗೆ, ಬಾಪೂ ಅವರು ತನಗೆ ಮಾತ್ರವಲ್ಲ, ತನ್ನ ಹೆಂಡತಿ ಮತ್ತು ಉಳಿದ ಮಕ್ಕಳ ಬಗ್ಗೆ ಸಹ ಎಂಥ ಅನ್ಯಾಯ ಮತ್ತು ದಬ್ಬಾಳಿಕೆಯಿಂದ ವರ್ತಿಸುತ್ತಾರೆ ಎಂದು ಬರೆದಿದ್ದ. ಆ ಪತ್ರವನ್ನು ಅವನು ಪ್ರಕಟಿಸಿಯೂ ಇದ್ದ. ಈಗ ಮತ್ತೊಮ್ಮೆ ಹರಿಲಾಲ 'ಹಮಾರಿ ಬಗಾವತ್' (ನಮ್ಮ ಬಂಡಾಯ) ಶೀರ್ಷಿಕೆಯ ಅಡಿಯಲ್ಲಿ ಒಂದು ದೀರ್ಘ ಲೇಖನಮಾಲೆಯನ್ನು ಬರೆಯಲಾರಂಭಿಸಿದ. ಬಾಪೂ ಅವರೇ ಸ್ವತಃ ಯಾವ ರೀತಿಯಲ್ಲಿ ತಮ್ಮ ಧರ್ಮದಿಂದ ಚ್ಯುತರಾಗಿದ್ದಾರೆ ಎಂಬ ಬಗ್ಗೆ ಆ ಲೇಖನದಲ್ಲಿ ಬರೆದು ಮನಸ್ಸಿನ ದುಃಖವನ್ನು ಹೊರಗೆ ಹಾಕಿದ; ಈ ಲೇಖನಕ್ಕೆ 'ನಮ್ಮ ಬಂಡಾಯ ಅಂದರೆ ಮಹಾತ್ಮನ ಬುದ್ಧಾವತಾರ' ಎಂದು